ಮುರಲೀಧರ ಕುಲಕರ್ಣಿ, ಬೀದರ್

*ಬೆಂಗಳೂರಿನಲ್ಲಿರುವ ಕೆಂಪೇಗೌಡ ವಿಗ್ರಹ ಖಡ್ಗ ಹಿಡಿದು ನಿಂತಿರುವುದೇಕೆ?*



ಬಿಟ್ಟರೆ ಟಿಪ್ಪೂ ಸುಲ್ತಾನನ ಖಡ್ಗದಂತೆ ಇದನ್ನೂ ವಿದೇಶೀಯರು ಹಾರಿಸಿಕೊಂಡು ಹೋಗಿಯಾರೆಂಬ ಭಯ!

ಮಹಾವೀರ ಕಾಸರ, ಶಿವಮೊಗ್ಗ

*ಒಂದು ವೇಳೆ ಹಾಲಿನ ಹೊಳೆಗೆ ಜೇನಿನ ಮಳೆ ಬಂದರೆ ಪರಿಣಾಮ ಏನಾಗಬಹುದು?*

ಸಕ್ಕರೆಯ ಗುಡ್ಡ ಸುತ್ತಿ, ತುಪ್ಪದ ನೆಲದಲ್ಲಿ ಸರಿದು, ಮೊಸರಿನ ಸ್ನೇಹ ಗಳಿಸಿ, ಊರೆಲ್ಲಾ ಪಂಚಾಮೃತ!

ಕೆ.ಪಿ. ರಾಮಗುಂಡಿ, ಬೈಲಹೊಂಗಲ

*ಕಾಯಕವೇ ಕೈಲಾಸ ಎಂದು ನಾನು ಹೇಳಿದರೆ ಇಲ್ಲೊಬ್ಬ ಕಾಸಿದ್ರೆ ಕೈಲಾಸ ಎನ್ನುವನಲ್ಲ, ನೀವೇನೆನ್ನುವಿರಿ ರಾಮ್?*

ಕಾಯಕದಿಂದ ಸಂದ ಕಾಸಿದ್ರೆ ಕೈಸಾಲವಿಲ್ಲದ ಕೈಲಾಸ.

ಪಿ.ಎಸ್. ಶ್ರೀವತ್ಸ, ಬೆಂಗಳೂರು

*ಪ್ರಾಣಿಗಳ ಸಾವಿನಲ್ಲೂ, ಮಾನವರ ಸಾವಿನಲ್ಲೂ ಏನಾದರೂ ವ್ಯತ್ಯಾಸವಿದೆಯೆ?*




ಮನುಷ್ಯ ಸತ್ತು ಕಟ್ಟೆ/ಕಟ್ಟೆಗೆ ಸೇರುತ್ತಾನೆ; ಪ್ರಾಣಿಗಳು ಸತ್ತು ತಟ್ಟೆ ಸೇರುತ್ತವೆ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ

*ಬಹುತೇಕ ಮಠಾಧೀಶರಿಗೆ ಮುಖ್ಯವಾಗಿ ಬೇಕಾದ್ದು ಜಾತಿಧರ್ಮವೋ, ಮಾನವಧರ್ಮವೋ ರಾಮ್‌ಜೀ?*

ಎರಡೂ ಅಲ್ಲ; ಮಾ – ಬೇಡ; ನವ – ಹೊಸದು; ಎಂದು ಹಳತಕ್ಕೇ ಅಂಟಿಕೊಳ್ಳಬೇಕಾದ ಕರ್ಮ.

ದ್ವಾರಕಾನಾಥ್, ಬೆಂಗಳೂರು

*ನಮ್ಮ ನಾಯಕರು ನಾಯಿಗಳಂತೆ ಕಚ್ಚಾಡಲು ಕಲಿತಿದ್ದಾರೆ. ಆದರೆ ನಾಯಿಗಳೇಕೆ ಮನುಷ್ಯರಂತೆ ಕಚ್ಚಾಡಲು ಕಲಿತಿಲ್ಲ?*

ಉತ್ತಮರಿಂದ ಮಾತ್ರ ಜ್ಞಾನ ಪಡೆಯಬೇಕು ಎಂಬ ಅಂಶ ನಾಯಿಗಳಿಗೆ ತಿಳಿದಿದೆಯಂತೆ.

ಪಿ. ಚಿದಾನಂದ, ಜವನಗೊಂಡನಹಳ್ಳಿ

*ಇಲ್ಲೊಬ್ಬ ಹಣವಿಲ್ಲದೆ ಬದುಕುವ ಮಾರ್ಗ ತೋರಿಸಿಕೊಡಿ ಎಂದು ಕೇಳಿಕೊಳ್ಳುತ್ತಿದ್ದಾನಲ್ಲಾ...?*

ಉತ್ತಮ ಮಾರ್ಗವೇ ಇದೆಯಲ್ಲ! ಬೆಳಗೆರೆ ಕೃಷ್ಣಶಾಸ್ತ್ರಿಗಳ ಜೀವನ ಮಾರ್ಗ!

ನರಸಿಂಹ ಪೈ, ಹೊನ್ನಾವರ

*ಧನಲಕ್ಷ್ಮಿ ಮತ್ತು ವಿಜಯಲಕ್ಷ್ಮಿ ಒಲಿಯುವುದು ಯಾವಾಗ?*

ಶ್ರಮ ನಾರಾಯಣ ಮತ್ತು ಕೌಶಲ ನಾರಾಯಣ ಒಟ್ಟಾದಾಗ.

ಬಿ. ಚಂದ್ರೇಗೌಡ, ಬೆಂಗಳೂರು

*ತಾಪತ್ರಯ ಎಂದರೇನು?*

ಮೂರು ತಾಪಗಳು – ಪ್ರತಾಪ; ತನ್ಮೂಲಕ ಸ್ವತಕ್ಕೆ/ಇತರರಿಗೆ ತಾಪ; ಕಡೆಯಲ್ಲಿ ಪಶ್ಚಾತ್ತಾಪ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಮಿತ್ರನಿಗೂ, ಶತ್ರುವಿಗೂ ಇರುವ ವ್ಯತ್ಯಾಸವೇನು?*

ಅರಿತು ಬೆರೆತರೆ ಮಿತ್ರ; ಹರಿದು ಸರಿದರೆ ಶತ್ರು.

ರತ್ನಾ ಅಶೋಕ ಗೊರವರ, ಧಾರವಾಡ

*ನಾರಿ ಮುನಿದರೆ ಮಾರಿ. ಗಂಡು ಮುನಿದರೆ?*

ತೋರಿಸಿ ಹೊರಕ್ಕೆ ದಾರಿ...

ಫಾಲನೇತ್ರ ಸಜ್ಜನ, ಶಿರಸಿ

*ಸಂಜೀವಿನಿ ಸಸ್ಯ ತರಬಲ್ಲ ಹನುಮಂತನಿದ್ದಾಗ ರಾಮ ಮತ್ತು ರಾಮನ ಆಪ್ತರು ಸಾಯಬಾರದಿತ್ತಲ್ಲವೆ?*

ಸಾಯಲೇಬೇಕಿತ್ತು. ಸಂಜೀವಿನಿ ಜೀವ ಕೊಡುತ್ತದೆ, ಯೌವನವನ್ನಲ್ಲ. ವೃದ್ಧಾಪ್ಯದ ಭಾರಕ್ಕೆ ಹೋಲಿಸಿದರೆ ಸಾವು ಬಲು ಸುಂದರ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ರಾಜಕೀಯ ಎಂಬ ದಾರಿಯಲ್ಲಿ ಮುಳ್ಳು ಚೆಲ್ಲುವವರೇ ಜಾಸ್ತಿ. ಏಕೆ?*

ಮುಳ್ಳು ತುಳಿದವರಿಗೆ ಅದನ್ನು ಹೆಕ್ಕಿ ತೆಗೆಯಲು ಗುಂಡುಸೂಜಿ ಕೊಟ್ಟು ಮತ ಕೇಳಲು!

## ಬಹುಮಾನಿತ ಪ್ರಶ್ನೆ

ವಿದ್ಯಾ ಎನ್ ಪೈ, ಕಾಸರಕೋಡ

*ದೇಶಕ್ಕೆ ಗಂಡಾಂತರ ಭಯೋತ್ಪಾದಕರಿಂದಲೋ, ಭ್ರಷ್ಟ ರಾಜಕಾರಣಿಗಳಿಂದಲೋ?*

ಹಣಕ್ಕೆ ಮತ ಮಾರಿಕೊಳ್ಳುವವರಿಂದ; ಮತವನ್ನೇ ಹಾಕದ ಸೋ ಕಾಲ್ಡ್ ವಿದ್ಯಾವಂತರಿಂದ.

ಬಿ.ಎಸ್. ಸಿದ್ದರಾಮಯ್ಯ, ತುಮಕೂರು

*ಹಣದ ಚಲಾವಣೆ ನಿಂತರೆ ಭ್ರಷ್ಟಾಚಾರ ನಿಲ್ಲುವುದೆ?*

ಅದಕ್ಕೆ ಅವಶ್ಯವಾದ ಗುಣದ ಚಲಾವಣೆ ಆರಂಭವಾದರೆ ಮಾತ್ರ.

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

*ಅಮೃತ ಹೆಚ್ಚಾದರೆ ವಿಷ. ಮಳೆ ಹೆಚ್ಚಾದರೆ ಪ್ರವಾಹ. ಮದ ಹೆಚ್ಚಾದರೆ...?*

ಮ – ಮನುಷ್ಯತ್ವದ; ದ – ದಹನ.

ಭಾರತಿ ಮಾನಗೆ, ಹೊನ್ನಾವರ

*ಧನ ಮತ್ತು ಜ್ಞಾನ; ಇವುಗಳಲ್ಲಿ ಯಾವುದು ಶ್ರೇಷ್ಠ?*



ಯಾರಿಗೆ ಯಾವುದು ಇಲ್ಲವೋ ಅದು.

ಕೆ.ಪಿ. ಸುಜ್ಞಾನಾಚಾರ್ಯ, ಕಲಿಕೆರೆ

*ಪೂಜೆ, ಅಭಿಷೇಕಕ್ಕೆ ಆಗ ಬಾವಿ, ಕೆರೆಗಳ ನೀರು ಶ್ರೇಷ್ಠವಾಗಿತ್ತು. ಈಗ ಬಾಟಲ್ ನೀರು ಶ್ರೇಷ್ಠವೆ?*

ಹೌದು. ಬಾಟಲ್ ನೀರಿನಲ್ಲೂ ಉಗಿಯುವಷ್ಟು ಕೊಳಕುತನ ಇನ್ನೂ ತಲುಪಿಲ್ಲವಲ್ಲ!

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು

*ಅತ್ತೆ ಸೊಸೆ ಕೂಡಿ ಬಾಳಿದರೆ ಏನಾಗುತ್ತದೆ?*

ಹರಡಲು ಸುದ್ದಿ ಇಲ್ಲದೆ ಅಕ್ಕಪಕ್ಕದ ಮನೆಗಳವರಿಗೆ ಬೋರ್ ಆಗುತ್ತದೆ.

■ ರಾಮ್